ಶ್ರೀ ಹೆಚ್.ಡಿ. ದೇವೇಗೌಡ : 86,988 ಅರ್ಜಿದಾರರಿಂದ 26 ಕೋಟಿ ರೂಪಾಯಿಗಳು ಡಿಪಾಜಿಟ್ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದನ್ನು ಯಾವಾಗ ಕೊಡುತ್ತೀರಿ? ಇಲ್ಲದಿದ್ದರೆ ಬಡ್ಡಿಯನ್ನಾದರೂ ಕೊಡಬೇಕು.

ಅಧ್ಯಕ್ಷರು : ನೀವು ಹಳ್ಳಿಗಳಿಗೆ ಹೋದಾಗ ಬಡ್ಡಿಯನ್ನು ಬಿಡಿ ಎಂದು ಹೇಳುತ್ತೀರಿ ಇಲ್ಲಿ ಕೊಡಿ ಎಂದು ಹೇಳುತ್ತೀರಲ್ಲ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನೂ ಸಹ ಬಡವರ ಮಗ. ನಾನು ಶ್ರೀಮಂತರ ಬಗ್ಗೆ ಮಾತನಾಡುತ್ತಿಲ್ಲ. ಸಾಲವನ್ನು ತಂದು, ಮೈಮೇಲಿನ ಒಡವೆಗಳನ್ನು ಮಾರಿ ನಿವೇಶನಕ್ಕಾಗಿ ಹಣವನ್ನು ಕೊಟ್ಟಿದ್ದಾರೆ. ಇದು ಹಗುರವಾದ ಪ್ರಶ್ನೆಯಿಲ್ಲ.

ಅಧ್ಯಕ್ಷರು : ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಪ್ರಶ್ನೆಯನ್ನು ಕೇಳಲು ಅನೇಕ ಅವಕಾಶಗಳು ದೊರೆಯುತ್ತವೆ. ಆದ್ದರಿಂದ ದಯಮಾಡಿ ಮಾನ್ಯ ಚಿತ್ತರಂಜನ್‌ರವರಿಗೆ ಪ್ರಶ್ನೆಯನ್ನು ಕೇಳಲು ಅವಕಾಶ ಮಾಡಿಕೊಡಿ.

ಶ್ರೀ ಎಂ. ಶ್ರೀನಿವಾಸ್ : ಅರ್ಜಿದಾರರಿಂದ ಬಂದಿರುವ 26 ಕೋಟಿ ಹಣ ಇದೆಯೇ? ನನಗೆ ತಿಳಿದಮಟ್ಟಿಗೆ 7 ಕೋಟಿ ಸಾಲಕ್ಕಾಗಿ ಕೆನರಾಬ್ಯಾಂಕ್‌ಗೆ ಅರ್ಜಿಯನ್ನು ಹಾಕಿದ್ದಾರೆ.

(ಗೊಂದಲ)

ಭಟ್ಕಳ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಲಯದಲ್ಲಿ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳು

334 - ಡಾ॥ ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ರಲ್ಲಿ ಭಟ್ಕಳದಲ್ಲಿ ನಡೆದ ಕೋಮುಗಲಭೆ ಸಂಬಂಧ ಭಟ್ಕಳದ ಜೆ.ಎಂ.ಎಸ್.ಸಿ. ನ್ಯಾಯಾಲಯದಲ್ಲಿ ಮತ್ತು ಕಾರವಾರದ ಸೆಶೆನ್ಸ್ ನ್ಯಾಯಾಲಯದಲ್ಲಿ ಎಷ್ಟು ವ್ಯಕ್ತಿಗಳ ಮೇಲೆ ಎಷ್ಟು ಕ್ರಿಮಿನಲ್ ಕೇಸುಗಳನ್ನು ಹಾಕಲಾಗಿದೆ?*

ಆ) *ಈಗ ಕೋಮು ಸೌಹಾರ್ದತೆ ಇರುವುದರಿಂದ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

1993-94ರಲ್ಲಿ ಭಟ್ಕಳದಲ್ಲಿ ನಡೆದ ಕೋಮು ಗಲಭೆಯ ಪ್ರಯುಕ್ತ ಭಟ್ಕಳದ ಜೆ.ಎಂ.ಎಫ್ಸಿ ನ್ಯಾಯಾಲಯದಲ್ಲಿ 225 ವ್ಯಕ್ತಿಗಳ ಮೇಲೆ 31 ಪ್ರಕರಣಗಳನ್ನು ಹಾಗೂ ಕಾರವಾರದ ಸೆಶೆನ್ಸ್ ನ್ಯಾಯಾಲಯದಲ್ಲಿ 307 ವ್ಯಕ್ತಿಗಳ ಮೇಲೆ 33 ಕ್ರಿಮಿನಲ್ ಕೇಸ್ಗಳನ್ನು ಹಾಕಲಾಗಿದೆ.

ಆ)1.ಎರಡೂ ಕೋಮಿನ ಹಬ್ಬಗಳು ನಡೆಯುವಾಗ ಹೆಚ್ಚುವರಿ ಪೋಲೀಸ್ ಪಡೆ ಹಾಗೂ ಅಧಿಕಾರಿಗಳನ್ನು ರಾತ್ರಿ ಹಗಲು ಬಂದೋಬಸ್ತ ಮಾಡಲಾಗುತ್ತದೆ. ಅಲ್ಲದೇ ಉನ್ನತ ಮಟ್ಟದ ಅಧಿಕಾರಿಗಳೇ ಭಟ್ಕಳದಲ್ಲಿ ವಾಸ್ತವ್ಯ ಮಾಡಿ ಬಂದೋಬಸ್ತ್ ಮೇಲ್ವಿಚಾರಣೆ ನೋಡಿಕೊಳ್ಳುವಂತೆ ವ್ಯವಸ್ಥೆ ಮಾಡಲಾಗಿದೆ.

2. ಹಬ್ಬ ಹಾಗೂ ಇತರ ಸಂದರ್ಭಗಳಲ್ಲಿ ಪರಿಸ್ಥಿತಿ ನಿಭಾಯಿಸಲು ಸಂದರ್ಭಾನುಸಾರ ಜಿಲ್ಲಾ ಮತ್ತು ತಾಲ್ಲೂಕು ಮ್ಯಾಜಿಸ್ಟ್ರೇಟ್ರ ಜೊತೆ ನಿಕಟ ಸಂಬಂಧವಿಟ್ಟುಕೊಂಡು ನಿಷೇದಾಜ್ಞೆ ಜಾರಿ ಮಾಡಲಾಗುತ್ತದೆ.
3. ಎರಡೂ ಕಡೆಯ ಕಿಡಿಗೇಡಿಗಳ ಚಟುವಟಿಕೆಗಳ ಬಗ್ಗೆ ಸೂಕ್ತ ನಿಗಾ ಇಡಲಾಗಿದೆ.
4. ಸಿಟಿಜನ್ ಕಮಿಟಿ, ಮೊಹಲ್ಲಾ ಕಮಿಟಿಗಳನ್ನು ತಿಂಗಳಿಗೊಮ್ಮೆ ಸಭೆ ನಡೆಸಿ, ಅವರಿಂದ ಬರುವ ದೂರುಗಳನ್ನು ಸ್ವೀಕರಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ.
5. ಯಾವುದೇ ಜನಾಂಗದಿಂದ ದೂರು ಬಂದರೂ ದಾಕ್ಷಿಣ್ಯಕ್ಕೆ ಒಳಪಡದೆ ನಿಸ್ಪಕ್ಷಪಾತವಾಗಿ ಕ್ರಮ ಕೈಗೊಳ್ಳಲಾಗುತ್ತದೆ. ಪ್ರತಿ ಹಬ್ಬದ ಎರಡು ಮುರು ದಿವಸಗಳ ಮುಂಚೆ ಆಯಾ ಕಡೆಯ ಮುಖಂಡರನ್ನು ಕರೆಸಿ ವಿಚಾರ ವಿನಿಮಯ ಮಾಡಿಕೊಂಡು ಕ್ರಮ ಕೈಗೊಳ್ಳಲಾಗುತ್ತದೆ. ಹಗಲು ಮತ್ತು ರಾತ್ರಿಗಸ್ತನ್ನು ಬಗಿ ಗೊಳಿಸಲಾಗುತ್ತದೆ.

ಅಧ್ಯಕ್ಷರು : ಮಾನ್ಯ ಗೃಹ ಮಂತ್ರಿಗಳ ಪ್ರಶ್ನೆ ಮುದ್ರಣವಾಗುವಾಗ ಸ್ವಲ್ಪ ತಪ್ಪಾಗಿದೆ. (ಅ) ದಲ್ಲಿ ಅವರು ಕೇಳಿರತಕ್ಕದ್ದು ಕೋಮು ಸೌಹಾರ್ದತೆ ಸ್ಥಾಪನೆಯಾಗಿರುವುದರಿಂದ ಎಂದು, ಅದು ಮುದ್ರಣವಾಗುವಾಗ ಕೋಮ ಸೌಹಾರ್ದತೆ ಇಲ್ಲದೆ ಇರುವುದರಿಂದವೆಂದು ತದ್ವಿರುದ್ಧವಾಗಿ ಅರ್ಥ ಬಂದಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ದಯಮಾಡಿ ಅದನ್ನು ತಿದ್ದಿಕೊಳ್ಳಬೇಕಾಗಿ ವಿನಂತಿಸುವೆ.

ಡಾ।ಯು. ಚಿತ್ತರಂಜನ್ : ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಾದ್ಯಂತ ಕುತೂಹಲವನ್ನು ಕೆರಳಿಸುವಂಥ ಸನ್ನಿವೇಶ ಭಟ್ಕಳದಲ್ಲಿ ಇತ್ತೀಚೆಗೆ ನಿರ್ಮಾಣವಾಗಿತ್ತು. ಸತತವಾಗಿ ಒಂಬತ್ತು ತಿಂಗಳು ಅಲ್ಲಿ ಕೋಮು ಗಲಭೆ ನಡೆದಿತ್ತು. ಆ ಸಮಯದಲ್ಲಿ 18 ಕೊಲೆಗಳಾಗಿದೆ, 5 ಜನರು ನಾಪತ್ತೆಯಾಗಿದ್ದಾರೆ, ನೂರಾರು ಜನರಿಗೆ ಗಾಯಗಳಾದಂಥ ಪ್ರಕರಣಗಳಿವೆ. ಅವುಗಳಲ್ಲಿ ಪ್ರಮುಖವಾಗಿ ತಮ್ಮ ಗಮನವನ್ನು ಮತ್ತು ಈ ಸಭೆಯ ಗಮನವನ್ನು ಸೆಳೆಯುವುದಾದರೆ ಒಬ್ಬರು ಕೇಂದ್ರ ಸರ್ಕಾರದ ನೌಕರರಾದ ದೂರವಾಣಿ ಅಪರೇಟರ್ರವರ ಕೊಲೆಯು ಬೆಳಿಗ್ಗೆ 10-30ರಲ್ಲಿ 15 ಜನರ ಕಣ್ಣಿನ ಎದುರಿಗೆಯೇ ಆಯಿತು. ಆ ಪ್ರಕರಣದ ಬಗ್ಗೆ ಯಾರೂ ಅವರನ್ನು ಒತ್ತಿಹಿಡಿದರು, ಯಾರು ಚಾಕುವನ್ನು ಹಾಕಿದರು, ಯಾರು ತಲೆಯಮೇಲೆ ಕಲ್ಲನ್ನು ಹಾಕಿದರು ಎಂದು ಸಾಕ್ಷಿಯನ್ನು ಒದಗಿಸಿದರೂ ಸಹ ಅದರ ಬಗ್ಗೆ ಪೋಲೀಸ್ನವರು ಕೇಸ್ನು ದಾಖಲು ಮಾಡದೆ ಅದನ್ನು ತನಿಖೆಗೆ ಸಿಓಡಿಗೆ ವಹಿಸಿಕೊಟ್ಟರು. ಇನ್ನೊಬ್ಬರು ಗಂಗೊಳ್ಳಿ ಎನ್ನತಕ್ಕವರನ್ನು 3-30ರಲ್ಲಿ ರಸ್ತೆಯಲ್ಲಿಯೇ ನೂರಾರು ಜನರ ಎದುರಿನಲ್ಲಿಯೇ ಕಡಿದುಹಾಕಿದರು. ಅದರ ಬಗ್ಗೆ ಸಾಕ್ಷಿಯನ್ನು ಒದಗಿಸಿದರೂ ಸಹ ಪೋಲೀಸ್ನವರು ಕೇಸನ್ನು ದಾಖಲು ಮಾಡಿಕೊಳ್ಳದೆ ಸಿಓಡಿಗೆ ಅದನ್ನು ಒಪ್ಪಿಸಿದರು. ಈ ಹಿನ್ನೆಲೆಯಲ್ಲಿ ಯಾರ ಮೇಲೆ ಕೇಸನ್ನು ದಾಖಲೆ ಮಾಡಿದ್ದಾರೆಂದರೆ ನನಗೆ ಎರಡು ಗನ್ಮೆನ್ ಮತ್ತು ಎರಡು ಪೋಲೀಸ್ ಸೆಕ್ಯೂರಿಟಿಯನ್ನು ಕೊಟ್ಟಿದ್ದಾರೆ.

ನಾನು ಮನೆಯೊಳಗೇ ಇದ್ದೇನೆ. ನನ್ನ ಮೇಲೆ ಪೋಲೀಸ್ ಅಧಿಕಾರಿಯನ್ನು ಕೊಲೆ ಮಾಡಿದಂತಹ ಪ್ರಕರಣ ದಾಖಲಾಗಿದೆ. ಇದರಲ್ಲಿ ಎರಡು ಭಾಗ ಇದೆ. ಇನ್ನೊಂದು ಕೆಲಸದ ಮೇಲಿರುವಂಥ ಗಂಡಸರು.....

ಅಧ್ಯಕ್ಷರು : ಈಗ ತಾವು ಪ್ರಶ್ನೆ ಕೇಳಿದ್ದೀರಿ. ಸರ್ಕಾರದವರು ತಮ್ಮ ಮುಂದೆ ಉತ್ತರ ಇಟ್ಟಿದ್ದಾರೆ. ಆ ಉತ್ತರ ತಮಗೆ ಸಮಾಧಾನವಾಗದಿದ್ದರೆ ಉಪಪ್ರಶ್ನೆಯನ್ನು ಕೇಳಬಹುದು.

ಡಾ|| ಯು. ಚಿತ್ತರಂಜನ್ : ಅಮಾಯಕರ ಮೇಲೆ ಕೇಸುಗಳು ಏನು ದಾಖಲಾಗಿದೆ...

ಅಧ್ಯಕ್ಷರು : ನೀವು ಕೇಳುವುದು, ಕೇಸುಗಳನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಅಲ್ಲವೆ? ಅದನ್ನು ನಾನೇ ಕೇಳಿಬಿಡುತ್ತೇನೆ. ಈ ಕೇಸುಗಳು ಇನ್ಯೇಷ್ನಲ್ಲಿ ಹಾಕಿದ್ದ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಅವರ ಅಹವಾಲು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೆ, ನಾನು ಅವರ ಪ್ರಶ್ನೆಯನ್ನು ಗ್ರಾಸ್ ಮಾಡಿದ್ದೇನೆ. ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿ ಅವರ ಆಯೋಗದ ಮುಂದೆ ಈ ವಿಷಯ ಇರುವುದರಿಂದ ಆಯೋಗದ ತೀರ್ಪಿನ ಬಗ್ಗೆ ಕಾದು ನೋಡತಕ್ಕಂಥದ್ದು ಸರ್ಕಾರದ ಸರಿಯಾದ ಕ್ರಮ ಎನ್ನುವುದು ನನ್ನ ಅಭಿಪ್ರಾಯ.

ಅಧ್ಯಕ್ಷರು : ಆಗಬಹುದು.

ಡಾ|| ಯು. ಚಿತ್ತರಂಜನ್ : ಕೋಮ ಸೌಹಾರ್ದ ಈಗ ಇದೆ ಎಂದು ಬಹುಶಃ ಸರ್ಕಾರ ಒಪ್ಪುತ್ತದೆ. 532 ಜನ ಸತತವಾಗಿ ಕೋರ್ಟುಗಳಿಗೆ ತಿರುಗಾಡುವಂತಹ ಸಂದರ್ಭದಲ್ಲಿ ಈಗ ನೀವು ಏನು ಕ್ರಮಗಳು ಇಲ್ಲಿ, ಹೇಳಿದ್ದೀರಿ ಇದರಿಂದ ಕೋಮು ಸೌಹಾರ್ದ ನೆಲೆಸಲಿಕ್ಕೆ ಖಂಡಿತ ಸಾಧ್ಯವಿಲ್ಲ. ಆದಷ್ಟು ಬೇಗ ಇದರ ಮೇಲೆ ಕ್ರಮ ಕೈಗೊಳ್ಳಬೇಕೆಂದು ನನ್ನದು ಒಂದು ಒತ್ತಾಯ ಇದೆ. ಎರಡನೆಯದಾಗಿ, ವ್ಯವಸ್ಥೆಗಳಿಗೆ ನೀವೇನು ಎರಡನೆಯ ಪ್ರಶ್ನೆಗೆ ಉತ್ತರ ಕೊಟ್ಟಿದ್ದೀರಿ ಇದರಲ್ಲಿ ಕೇವಲ ಶಾಂತಿ ಸಭೆಗಳು, ಕಟ್ಟುನಿಟ್ಟಿನ ಕ್ರಮಗಳು, ಇಂತಹ ಶಬ್ದದ ಆಧಾರದ ಮೇಲೆ ಪರಿಹಾರ ಖಂಡಿತ ಸಿಗುವುದಿಲ್ಲ. ಈ ಪೋಲೀಸ್ ಸೌಲಭ್ಯ ಕೊಡುವುದಾದರೆ ಅಲ್ಲಿ ಖಾಯಂ ಆಗಿ ನೀವು ಪೋಲೀಸ್ ಸ್ಟೇಷನ್ನು ಅಪ್ಗ್ರೇಡ್ ಮಾಡಿದ್ದೀರಿ, ಹೆಚ್ಚುವರಿ ಪೋಲೀಸ್ ಅಧಿಕಾರಿಗಳನ್ನು ಕೊಟ್ಟಿದ್ದೀರಿ ತುಂಬಾ ಸಂತೋಷದ ವಿಷಯ. ಆದರೆ ಈ ಪೋಲೀಸ್ ಅಧಿಕಾರಿಗಳು ಇರಲಿಕ್ಕೆ ವಸತಿ ಸೌಲಭ್ಯ ಇಲ್ಲ.

ಅಧ್ಯಕ್ಷರು : ಅದು ಬೇರೆ ಪ್ರಶ್ನೆಗೆ ಬರುತ್ತೆ ಬಿಡಿ. ತಾವು ಹಾಗೆ ಪ್ರಶ್ನೆಯ ವ್ಯಾಪ್ತಿಯನ್ನು ಬಿಟ್ಟು ಹೊರಟರೆ ಇಡೀ ದಿವಸ ಬೇಕಾಗುತ್ತದೆ.

ರಾಜ್ಯದಲ್ಲಿ ರಸ್ತೆ ದರೋಡೆಗಳು

22 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನವರಿ 1, 95ರಿಂದ ಮಾರ್ಚ್ 95ರವರೆಗೆ ರಾಜ್ಯದಲ್ಲಿ ನಡೆದಿರುವ ರಸ್ತೆ ದರೋಡೆ, ಲೂಟಿ, ರೌಡಿಗಳ ದಾಂಧಲೆಗಳೆಷ್ಟು? (ಯಾವಾಗ ಮತ್ತುಎಲ್ಲೆಲ್ಲಿ ಎಂಬ ವಿವರ ಒದಗಿಸುವುದು)

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು) :

ಅ) ರಸ್ತೆ ದರೋಡೆ ರಸ್ತೆ	ಲೂಟಿ ರೌಡಿಗಳ	ಧಾಂದಲೆ
13	44	7

(ಅನುಬಂಧ -1, 2 ಮತ್ತು 3ರಲ್ಲಿ ವಿವರ ಒದಗಿಸಲಾಗಿದೆ)